3) ಜಿ. ಎಲ್. ಆರ್. ಸಿ. ಮಾಡುವ ಉದ್ದೇಶವೇನು ?

4) ಶಿಫಾರಸು ಆಯ್ಕೆ ಮಾಡುವ ಸಮಿತಿಗಳಿಂದ ಭ್ರಷ್ಟಾಚಾರಕ್ಕೆ ಅಸ್ಪದವಾಗುವ ಸಾಧ್ಯತೆಯ ಬಗ್ಗೆ ಸರ್ಕಾರದ ಪಾತ್ರವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು) :-

1) 8991.

2) ನೇಮಕಾತಿ ನಿಯಮಗಳಿಗೆ ಬದಲಾವಣೆ ತರಬೇಕಾಗುವುದು.

3) ಅಭ್ಯರ್ಥಿಗಳ ಮೌಖಿಕ ಸಂದರ್ಶನಕ್ಕೆ ಅವಕಾಶ ಮಾಡಿ ಸಾಮಾನ್ಯ ಜ್ಞಾನ ಹಾಗೂ ಇತರೆ ವಿಷಯಗಳ ಬಗ್ಗೆ ತಿಳಿಯುವ ಉದ್ದೇಶಕ್ಕಾಗಿ.

4) ಅಂತಹ ಸನ್ನಿವೇಶ ಸರ್ಕಾರದ ಗಮನಕ್ಕೆ ಬಂದಿಲ್ಲ.

ವಿಷಯ :- ಖಾಸಗಿ ಲೇಔಟ್‌ಗಳಿಗೆ ಲೈಸನ್ಸ ನೀಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 637 (914)

ಶ್ರೀ ಈಶ್ವರಪ್ಪ (ಶಿವಮೊಗ್ಗ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಖಾಸಗಿಯವರು ಲೇಔಟ್ ಮಾಡುವಾಗ ಸಾರ್ವಜನಿಕ ಸೇವೆಗಳಿಗೆ ಎಷ್ಟು ಭಾಗ ಮೀಸಲು ಇಡಬೇಕು ?

ಆ) ಅರ್ಧ ಎಕರೆ ಜಾಗ ಇದ್ದವರಿಗೂ ಈ ಮೀಸಲು ಅನ್ವಯಿಸುತ್ತದೆಯೇ ?

ಇ) ಪ್ಲಾನ್ ಮಂಜೂರು ಮಾಡಿ ಲೈಸನ್ಸ್ ಕೊಡಲು ಸರ್ಕಾರ ನಿಗದಿ ಮಾಡುವ ಗರಿಷ್ಟ ಜಾಗ ಎಷ್ಟು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :-

ಅ) 1) ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಿರುವ ಪಟ್ಟಣ ಮತ್ತು ನಗರಗಳಲ್ಲಿ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದ ನಿಯಮಗಳು, 1987 ರ ವಿಧಿ 16 (1) (ಡಿ) ಪ್ರಕಾರ ಲೇಔಟ್‌ನ ಒಟ್ಟು ವಿಸ್ತೀರ್ಣದಲ್ಲಿ ಶೇ. 15 ಕ್ಕಿಂತ ಕಡಿಮೆ ಇಲ್ಲದಂತೆ ಉದ್ಯಾನವನ ಮತ್ತು ಆಟದ ಮೈದಾನಕ್ಕೂ ಮತ್ತು ಶೇ. 10 ರಷ್ಟು ಸಾರ್ವಜನಿಕ ಸೌಲಭ್ಯಗಳಿಗಾಗಿಯೂ ಮೀಸಲಾಗಿಡಬೇಕಾಗಿರುತ್ತದೆ.

2) ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸದೆ ಇರುವ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉದ್ಯಾನವನ ಮತ್ತು ಆಟದ ಮೈದಾನಗಳಿಗೆ ಶೇ. 10 ಕ್ಕಿಂತ ಕಡಿಮೆ ಇಲ್ಲದಂತೆ ಕಾದಿರಿಸಬೇಕಾಗಿರುತ್ತದೆ.

ಆ) ಹೌದು.

ಇ) ನಿವೇಶನದ ವಿಸ್ತೀರ್ಣಕ್ಕೆ ಗರಿಷ್ಟ ಮಿತಿ ಇಲ್ಲ. ಆದರೆ ನಗರ ಭೂಮಿ (ಮಿತಿ ಮತ್ತು ಹತೋಟಿ) ಕಾಯ್ದೆ ಅನ್ವಯಿಸುವ ಪಟ್ಟಣಗಳಲ್ಲಿ ನಿವೇಶನದ ಗರಿಷ್ಟ ವಿಸ್ತೀರ್ಣವನ್ನು ಆ ಪಟ್ಟಣಕ್ಕೆ ಅನ್ವಯಿಸುವ ಮಿತಿಗೆ ಸೀಮಿತಗೊಳಿಸಲಾಗುತ್ತದೆ. ಹಾಗೂ ವ್ಯವಸಾಯದ ವಲಯದಲ್ಲಿ ಫಾರಂ ಹೌಸ್‌ಗಳನ್ನು ಕಟ್ಟಬೇಕಾದಲ್ಲಿ ಕನಿಷ್ಟ 1.2 ಹೆಕ್ಟೇರ್ ವ್ಯವಸಾಯದ ಜಮೀನಿನಲ್ಲಿ 200 ಚ. ಮಿ. ಫ್ಲಿಂತ್ ಪ್ರದೇಶ ಮೀರದಂತೆ ಕಟ್ಟಡ ಕಟ್ಟಲು ಅವಕಾಶವಿರುತ್ತದೆ.

ವಿಷಯ :- ಖಾಲಿ ನಿವೇಶನಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಹಂಚುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 638 (1082)

ಶ್ರೀ ಆಂಜನ ಮೂರ್ತಿ (ನೆಲಮಂಗಲ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು 1983 ರಿಂದ 1989 ರ ವರೆಗೆ ಎಷ್ಟು ಖಾಲಿ ನಿವೇಶನಗಳನ್ನು ಹಂಚಲಾಗಿದೆ ?

ಆ) ಅವುಗಳಲ್ಲಿ ಎಷ್ಟು ಮಂದಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಹಂಚಲಾಗಿದೆ ?

ಇ) ಇನ್ನು ಎಷ್ಟು ಅರ್ಜಿಗಳು ಬಾಕಿ ಉಳಿದಿವೆ ?

ಈ) ಹಾಗಿದ್ದಲ್ಲಿ ಈ ತಾರತಮ್ಯಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :-

ಅ) 24,224 ನಿವೇಶನಗಳನ್ನು ಹಂಚಲಾಗಿದೆ.

ಆ) 5,556 ನಿವೇಶನಗಳನ್ನು ಹಂಚಲಾಗಿದೆ.

ಇ) 86,988 ಅರ್ಜಿಗಳು ಬಾಕಿ ಉಳಿದಿವೆ.

ಈ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ನಿಯಮಾನುಸಾರ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಹಂಚಿಕೆ ನಿಯಮಾವಳಿ ಪ್ರಕಾರ ನಿವೇಶನಗಳನ್ನು ಹಂಚುವುದರಿಂದ ನಿವೇಶನ ಹಂಚಿಕೆಯಲ್ಲಿ ಯಾವ ತಾರತಮ್ಯ ಇರುವುದಿಲ್ಲ.

ವಿಷಯ :- ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಂಡಲ್ ಪಂಚಾಯ್ತಿ ವ್ಯಾಪ್ತಿಗೆ ಸೇರಿದ ಹಳ್ಳಿಗಳನ್ನು ಸೇರಿಸಿಕೊಂಡಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 639 (1003)

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) :- ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಅಭಿವೃದ್ಧಿ ಪ್ರಾಧಿಕಾರಕ್ಕೆ ಇತ್ತೀಚೆಗೆ ಮುಂಡಲ್ ಪಂಚಾಯ್ತಿ ವ್ಯಾಪ್ತಿಗೆ ಬರುವ 93 ಹಳ್ಳಿಗಳನ್ನು ಸೇರಿಸಿಕೊಳ್ಳಲಾಗಿದೆಯೇ ?

ಆ) ಹಾಗಿದ್ದಲ್ಲಿ, ಇದರ ಉದ್ದೇಶವೇನು ?

ಶ್ರೀ ಕೆ. ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಷಯ :- ಹಾಸನ ತಾಲ್ಲೂಕಿನಲ್ಲಿ ಕಪ್ಪು ಹಲಗೆ ಯೋಜನೆಯಲ್ಲಿ ಕಟ್ಟಿರುವ ಶಾಲೆಗಳ ಕಳಪೆ ಕಾಮಗಾರಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 641 (710)

ಶ್ರೀ ಬಿ. ಶಿವರಾಮ್ (ಗೂಡಸೀ) :- ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ತಾಲ್ಲೂಕಿನ ರಾಯಪ್ಪರ ಕಟ್ಟಳ್ಳಿ ಮತ್ತು ಸಂಬದ ಕೊಪ್ಪಲುಗಳಲ್ಲಿ ಕಪ್ಪು ಹಲಗೆ ಯೋಜನೆಯಡಿಯಲ್ಲಿ ಕಟ್ಟಿರುವ ಕಟ್ಟಡಗಳ ಕಾಮಗಾರಿ ಕೆಲಸ ಸರಿಯಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಕಟ್ಟಡಗಳಲ್ಲಿ ಶಾಲೆಗಳು ನಡೆಯುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :-

ಅ) ಹೌದು.

ಆ) ಈ ಕಟ್ಟಡಗಳಲ್ಲಿಯೆ ತರಗತಿಗಳನ್ನು ನಡೆಸಲಾಗುತ್ತಿದೆ.

ಇ) ಈ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಉಪ ನಿರ್ದೇಶಕರಿಗೆ ನಿರ್ದೇಶನ ನೀಡಲಾಗಿದೆ. ಇದನ್ನು ಸರಿಪಡಿಸಲು ಕ್ರಮ ಮುಂದುವರಿಯುವುದು.